ವಾರ್ನಿಂಗ್ ಕೊಟ್ಟು ಬಿಟ್ಟು ಬಿಟ್ಟಿದ್ದ. ಅಂದಿನಿಂದ ಸಾಥಿಯಾ ಗಲ್ಲಿಯವರೆಲ್ಲರ ಕೆಲಸಗಳನ್ನು ಮಾಡಿಕೊಡತೊಡಗಿದ. ಅವರು ಖುಷಿಯಿಂದ ಕೊಟ್ಟಷ್ಟು ಸಂತೋಷದಿಂದ ತೆಗೆದುಕೊಳ್ಳುತ್ತಿದ್ದ. ಅಷ್ಟರಲ್ಲಿಯೇ ತನ್ನ ಬದುಕನ್ನು ಸಾಗಿಸುತ್ತಿದ್ದ."

ಇಂಥ ಅಪರೂಪದ ಪರೋಪಕಾರಿ ವ್ಯಕ್ತಿಯ ಬಗ್ಗೆ ವಿಷಕಾರುವವರಿಗೆ ಕೃತಘ್ನರೆನ್ನದೆ ಬೇರೆ ಏನೆಂದು ಕರೆಯಬೇಕು?

ನಾನು ಸಮೀಪದ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸಲುವಾಗಿ ತಂದೆಯವರ ಹೆಸರನ್ನು ದಾಖಲಿಸಿದ್ದೆ. ವಾರದಲ್ಲಿ ಎರಡು ಸಲ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲೇಬೇಕಾಗುತ್ತಿತ್ತು.

ಒಂದು ದಿನ ಡಯಾಲೆಸಿಸ್‌ನ ನಂತರ ನಾವು ಮನೆಗೆ ಹಿಂದಿರುಗಿದೆವು. ಸುಷ್ಮಾ ಊಟಕ್ಕೆ ಬಡಿಸುವಾಗ, ''ಇಂದು ಯಾರು ಬಂದಿದ್ದರೆಂಬುದು ನಿಮಗೆ ಗೊತ್ತೆ?" ಎಂದು ಕೇಳಿದಳು.

ನನ್ನ ಉತ್ತರ ನಿರೀಕ್ಷಿಸದೆ ಅವಳೇ ಹೇಳಿದಳು, ''ಕಾಶೀರಾಮ ಅವರ ಸೊಸೆ ನಂದಿನಿ ಬಂದಿದ್ದಳು. ಅವಳು ಸ್ವಲ್ಪ ಹೊತ್ತು ಇಲ್ಲಿ ಕುಳಿತು, ಇತ್ತಿತ್ತಲಾಗಿ ಸಾಥಿಯಾ ನಿಮ್ಮ ಮನೆಯಲ್ಲಿ ಊಟ ಮಾಡುತ್ತಾನೇನು" ಎಂದು ಕೇಳಿದಳು. ಇಲ್ಲವೆಂದು ನಾನು ಉತ್ತರಿಸಿದೆ. "ಹಾಂ. ಒಮ್ಮೊಮ್ಮೆ ನಾನು ಆತನಿಗೆ ತಿಂಡಿ ಕೊಡುತ್ತೇನೆ. ಅವನಿಗೆ ಪ್ರತಿದಿನ ಊಟಕೊಡಬೇಡವೆಂದು ನಂದಿನಿ ಹೇಳುತ್ತಿದ್ದಳು. ಆತ ಊಟಕ್ಕೆ ಕುಳಿತರೆ ನಾಲ್ಕು ಜನರ ಊಟ ಒಬ್ಬನೇ ಮಾಡುತ್ತಾನೆ. ಅವನೊಬ್ಬ ಬಕಾಸುರ."

"ಅಂಥ ಲಕ್ಷಣಗಳನ್ನು ನಾನು ಅವನಲ್ಲಿ ಒಂದು ಸಲವೂ ಕಂಡಿಲ್ಲ" ಎಂದೆ.

"ಆಂಟಿಯವರೆ, ಅವರ ಹಿರಿಯ ಮಗಳ ಮದುವೆಯ ಕಾಲದಲ್ಲಿ ಮನೆಯಲ್ಲಿ ಬಹಳ ಜನ ಬೀಗರು ಬಂದಿದ್ದರು. ಆದುದರಿಂದ ಹಾಲನ್ನು ಬಹಳ ತರಿಸಬೇಕಾಗುತ್ತಿತ್ತು. ಹಾಲಿನ ಕೆನೆಯನ್ನು ದೊಡ್ಡ ಪಾತ್ರೆಯೊಂದರಲ್ಲಿ ಸಂಗ್ರಹಿಸಿ ಸ್ಟೋರ್ ರೂಮಿನಲ್ಲಿಡಲಾಗಿತ್ತು. ಮದುವೆ ದಾದರಿನ ಕಲ್ಯಾಣ ಮಂಟಪದಲ್ಲಿತ್ತು. ಆದುದರಿಂದ ನಾವೆಲ್ಲರೂ ನಸುಕಿನಲ್ಲಿಯೇ ಅಲ್ಲಿಗೆ ಹೋಗಿದ್ದೆವು. ಆಗ ಸಾಥಿಯಾ ಸ್ಟೋರ್ ರೂಮಿನೊಳಕ್ಕೆ ಹೋಗಿ ಎಲ್ಲ ಕೆನೆಯನ್ನು ಮುಗಿಸಿಬಿಟ್ಟ. ಅಡುಗೆ ಮಾಡುವ ಹೆಂಗಸರು ಕಿಚನ್ನಿನೊಳಗೆ ಹೋಗಿ ನೋಡಿದರೆ ಕೆನೆಯ ಪಾತ್ರೆ ಬರಿದಾದುದು ಬಯಲಿಗೆ ಬಂದಿತು! ನಮ್ಮ ಮಾವನವರು ಮರುದಿನ ಅವನನ್ನು ಬಹಳ ಬೈದರು. ಮತ್ತು ಮರುದಿನದಿಂದ ನಮ್ಮ ಮನೆಗೆ ಬಂದು ಹೋಗುವುದನ್ನು ಬಂದು ಮಾಡಿದರು" ಎಂದು ನಂದಿನಿ ಹೇಳಿದ್ದನ್ನು ಸುಷ್ಮಾ ನನಗೆ ಹೇಳಿದಳು.

★★★

ಬಾಂದ್ರಾದ ಒಂದು ಕಾಲೇಜಿನಲ್ಲಿ ಸಂಗೀತ ಕಾರ್ಯಕ್ರಮವಿತ್ತು. ಹೆಸರಾಂತ ಗಾಯಕರು ಬರುವವರಿದ್ದರು. ಮಮತಾ ಎಲ್ಲಿಂದಲೊ ಎರಡು ಪಾಸುಗಳನ್ನು ತಂದಿದ್ದಳು. ಎಂಟರಿಂದ ರಾತ್ರಿ ಹನ್ನೊಂದರ ಸಮಯ ಅದಾಗಿತ್ತು. ಮಮತಾ ಸುಷ್ಮಾಳನ್ನು ಕಾರ್ಯಕ್ರಮಕ್ಕೆ ಕರೆದೊಯ್ಯುವ ಇಚ್ಛೆಯವಳಾಗಿದ್ದಳು. ಸುಷ್ಮಾ ನನ್ನನ್ನು ಆ ಕುರಿತು ಕೇಳಿದಳು.

"ಅವಶ್ಯ ಹೋಗಿರಿ'' ಎಂದೆ.

ಕಾರ್ಯಕ್ರಮ ಮುಗಿದ ಮೇಲೆ ಸುಷ್ಮಾ ಮನೆಗೆ ಬರಬೇಕಾದರೆ ರಾತ್ರಿ ಹನ್ನೆರೆಡೂವರೆಯಾಗಿತ್ತು. ಅವಳು ಓಡುತ್ತಲೇ ಒಳಗೆ ಬಂದು, "ಸ್ವಲ್ಪ ಹೊರಗಡೆ ಹೋಗಿ ಮೆಟ್ಟಿಲುಗಳ ಕೆಳಗೆ ನೋಡಿ ಬನ್ನಿ" ಎಂದಳು.

ನನಗೇನೂ ಅರ್ಥವಾಗಲಿಲ್ಲ. ಹೊರಗೆ ಹೋಗಿ ನೋಡಿದೆ. ಸಾಥಿಯಾ ಮೆಟ್ಟಿಲುಗಳ ಕೆಳಗೆ